ದೂರವಾಣಿ : 080 - 22263479

ಬೆಂ.ಮ.ಪ್ರ.ಪ್ರಾ.

# ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ

ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ, ನಂ. 1, ಆಲಿ ಆಸ್ಕರ್ ರಸ್ತೆ, ಬೆಂಗಳೂರು – 560 052.

ಸಂಖ್ಯೆ: STRRPA/TP/CC/383/2022-23 ದಿನಾಂಕ:18-12.2023.

**ಪ್ರಾರಂಭಿಕ ಪ್ರಮಾಣ ಪತ್ರ**

**ನಮೂನೆ- III**

**ನಿಯಮ- 35**

**ವಿಷಯ:** ಹೊಸಕೋಟೆ ತಾಲ್ಲೂಕು, ಅನುಗೊಂಡನಹಳ್ಳಿ ಹೋಬಳಿ, ತಿರುಮಲಶೆಟ್ಟಿಹಳ್ಳಿ ಗ್ರಾಮದ ಸ.ನಂ.21ರಲ್ಲಿ 2ಎ-16ಗುಂಟೆ ವಿಸ್ತೀರ್ಣದ ಅನುಮೋದಿತ ಏಕ ನಿವೇಶನ ವಿನ್ಯಾಸದಲ್ಲಿನ ಸ್ವತ್ತಿನ ಸಂಖ್ಯೆ. 150300402500120977 ರಲ್ಲಿ ಬೇಸ್‌ಮೆಂಟ್+ನೆಲ+13 ಅಂತಸ್ತುಗಳ ವಸತಿ ಘಟಕಗಳು ಹಾಗೂ ನೆಲ+03 ಅಂತಸ್ತುಗಳ ರಿಕ್ರಿಯೇಷನ್ ಕ್ಲಬ್ ಉದ್ದೇಶದ ಕಟ್ಟಡ ಕಟ್ಟಲು ಕಟ್ಟಡ ನಿರ್ಮಾಣ ಮಾಡಲು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961ರ ಕಲಂ 15(1)ರ ಅಡಿಯಲ್ಲಿ ಅನುಮೋದಿಸಿ ಪ್ರಾರಂಭಿಕ ಪ್ರಮಾಣ ಪತ್ರ ನೀಡುವ ಬಗ್ಗೆ

**ಉಲ್ಲೇಖ:**
1. ಮೆ:ಇಶಾ ಕಾರ್ಪ್ ಇವರ ಅರ್ಜಿ ದಿನಾಂಕ: 22.06.2023
2. ಈ ಕಛೇರಿಗೆ ಶುಲ್ಕ ಪಾವತಿ ಮಾಡಿರುವ ರಸೀತಿ ಸಂಖ್ಯೆ:4539 ದಿನಾಂಕ:01.12.2023.

*******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಹೊಸಕೋಟೆ ತಾಲ್ಲೂಕು, ಅನುಗೊಂಡನಹಳ್ಳಿ ಹೋಬಳಿ, ತಿರುಮಲಶೆಟ್ಟಿಹಳ್ಳಿ ಗ್ರಾಮದ ಸ.ನಂ.21ರಲ್ಲಿ 2ಎ-16ಗುಂಟೆ ವಿಸ್ತೀರ್ಣದಲ್ಲಿ ಈ ಪ್ರಾಧಿಕಾರದಿಂದ ಅನುಮೋದಿಸಲಾದ ವಸತಿ ಉದ್ದೇಶದ ಏಕನಿವೇಶನ ವಿನ್ಯಾಸ ನಕ್ಷೆಯಲ್ಲಿನ ಲೋಯರ್ ಬೇಸ್‌ಮೆಂಟ್+ನೆಲ+13 ಅಂತಸ್ತುಗಳ ವಸತಿ ಘಟಕಗಳು ಹಾಗೂ ನೆಲ+03ಅಂತಸ್ತುಗಳ ರಿಕ್ರಿಯೇಷನ್ ಕ್ಲಬ್ ಒಟ್ಟಾರೆ 208 ಘಟಕಗಳಿಗೆ 30139.51ಚ.ಮೀ. ವಿಸ್ತೀರ್ಣದಲ್ಲಿ ವಸತಿ ಉದ್ದೇಶದ ಕಟ್ಟಡ ನಿರ್ಮಾಣ ಮಾಡುವ ಸಂಬಂಧ ಶ್ರೀ ಟಿ.ಎನ್.ಚಿಕ್ಕಣ್ಣ ಬಿನ್ ನಾಗಪ್ಪ ಇವರ ಪರವಾಗಿ ಮೆ:ಇಶಾ ಕಾರ್ಪ್ ಇದರ ಪ್ರತಿನಿಧಿಯಾದ ಶ್ರೀ ಬಿ.ಬಾಲಕೃಷ್ಣರೆಡ್ಡಿ ಮತ್ತು ಶ್ರೀ ಲಕ್ಷ್ಮೀಪತಿ.ವಿ ಇವರಿಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961ರ ಕಲಂ 15(1) ರನ್ವಯ ಈ ಕೆಳಕಂಡ ಷರತ್ತುಗಳಿಗೊಳಪಡಿಸಿ, ಪ್ರಾರಂಭಿಕ ಪ್ರಮಾಣ ಪತ್ರ ನೀಡಿದೆ.

**ಷರತ್ತುಗಳು**

1) ಇದು ಕಟ್ಟಡ ನಿರ್ಮಾಣದ ಬಗ್ಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 15(1)ರಡಿ ನೀಡಲಾಗಿರುವ ಪ್ರಾರಂಭಿಕ ಪ್ರಮಾಣ ಪತ್ರವಾಗಿರುತ್ತದೆ. ಈ ಪ್ರಾರಂಭಿಕ ಪ್ರಮಾಣ ಪತ್ರವು ಮಾಲೀಕತ್ವದ ದೃಢೀಕರಣ/ ರುಜುವಾತು ಪತ್ರವಾಗಿರುವುದಿಲ್ಲ.
2) ಸದರಿ ನಿವೇಶನದಲ್ಲಿ ಕಟ್ಟುವ ಕಟ್ಟಡವನ್ನು ಈ ಕಛೇರಿಯಿಂದ ಅನುಮತಿ ನೀಡಿರುವಂತೆ ವಸತಿ ಉದ್ದೇಶದ ಮಾತ್ರ ಉಪಯೋಗಿಸತಕ್ಕದ್ದು ಮತ್ತು ಕಟ್ಟಡವನ್ನು ಅನುಮೋದಿತ ನಕ್ಷೆಯಂತೆ ನಿರ್ಮಿಸತಕ್ಕದ್ದು.

..2.

3) ಕಟ್ಟಡ ಕಟ್ಟಲು ಪ್ರಾರಂಭಿಸುವ ಮುನ್ನ ಸ್ಟಬಿಲಿಟಿ ಸರ್ಟಿಫೀಕೆಟ್‌ನ್ನು ಸ್ಟ್ರಕ್ಚರಲ್ ಇಂಜಿನಿಯರ್ ರವರಿಂದ ಕಡ್ಡಾಯವಾಗಿ ಪಡೆಯತಕ್ಕದ್ದು.

4) ಸ್ವಾಧೀನಾನುಭವ ಪ್ರಮಾಣ ಪತ್ರ ಮತ್ತು ಪೂರ್ಣಗೊಂಡ ಪ್ರಮಾಣ ಪತ್ರವನ್ನು ಸ್ಥಳೀಯ ಸಂಸ್ಥೆಯಿಂದ ಪಡೆದುಕೊಳ್ಳತಕ್ಕದ್ದು.

5) ಕಟ್ಟಡ ನಿರ್ಮಾಣವು ಜಾರಿಯಲ್ಲಿರುವ ವಲಯ ನಿಯಮಾವಳಿಗಳು ಮತ್ತು ಕಟ್ಟಡದ ವಿಧಿಗಳ ನಿಬಂಧನೆಗಳಿಗೆ ಅನುಗುಣವಾಗಿರತಕ್ಕದ್ದು.

6) ಈ ಪ್ರಾರಂಭಿಕ ಪ್ರಮಾಣ ಪತ್ರವು ಮಂಜೂರಾದ ದಿನಾಂಕದಿಂದ ಎರಡು ವರ್ಷದವರೆಗೆ ಮಾತ್ರ ಮಾನ್ಯತೆ ಹೊಂದಿರುತ್ತದೆ. ಈ ಅವಧಿ ಮುಗಿದ ನಂತರ ಹೊಸದಾಗಿ ಪ್ರಾರಂಭಿಕ ಪ್ರಮಾಣ ಪತ್ರ ಪಡೆಯದೆ ಕಟ್ಟಡ ಕಾರ್ಯವನ್ನು ಕೈಗೊಳ್ಳಬಾರದು ಹಾಗೂ ಮುಂದುವರೆಸಬಾರದು.

7) ನಿರ್ಮಾಣ ಕಾರ್ಯಕ್ಕೆ ಬಾಲ ಕಾರ್ಮಿಕರನ್ನು ನಿಯೋಜಿಸಿಕೊಳ್ಳತಕ್ಕದಲ್ಲ ಹಾಗೂ ಕಾರ್ಮಿಕರ ಕಲ್ಯಾಣ ನಿಧಿಗೆ ಪಾವತಿಸಬೇಕಾದ ಶುಲ್ಕವನ್ನು ಸಂಬಂಧಪಟ್ಟ ಸ್ಥಳೀಯ ಸಂಸ್ಥೆಯಿಂದ ಪರವಾನಗಿ ಪಡೆಯುವ ಸಮಯದಲ್ಲಿ ಕಡ್ಡಾಯವಾಗಿ ಪಾವತಿಸತಕ್ಕದ್ದು.

8) ಅನುಮೋದಿತ ನಕ್ಷೆಯನ್ನು ಉಲ್ಲಂಘಿಸಿ ಕಟ್ಟಡ ಕಾರ್ಯವನ್ನು ಕೈಗೊಳ್ಳಬಾರದು ಮತ್ತು ಏನಾದರೂ ಬದಲಾವಣೆಗಳು ಅವಶ್ಯವಿದ್ದಲ್ಲಿ ಮಾರ್ಪಾಡಿತ ನಕ್ಷೆಗೆ ಮಂಜೂರಾತಿ ಪಡೆದು ಮುಂದುವರೆಸತಕ್ಕದ್ದು.

9) ಅನುಮೋದಿತ ಕಟ್ಟಡ ನಕ್ಷೆಯ ಒಂದು ಪ್ರತಿಯನ್ನು ಕಟ್ಟಡ ನಿರ್ಮಾಣ ಸ್ಥಳದಲ್ಲಿ ಅಧಿಕಾರಿಗಳ ಸಮೀಕ್ಷೆಗಾಗಿ ಪ್ರದರ್ಶಿಸತಕ್ಕದ್ದು.

10) ಕಟ್ಟಡ ನಿರ್ಮಾಣ ಸಾಮಾಗ್ರಿಗಳನ್ನು ರಸ್ತೆಯಲ್ಲಿ ಶೇಖರಣೆ ಮಾಡಬಾರದು, ಈ ರೀತಿ ಮಾಡಿರುವುದು ಕಂಡು ಬಂದಲ್ಲಿ ಪ್ರಾರಂಭಿಕ ಪ್ರಮಾಣ ಪತ್ರವನ್ನು ರದ್ದುಪಡಿಸಲಾಗುವುದು.

11) ಕಟ್ಟಡ ನಡುಜಾಗ ಪ್ರದೇಶದಲ್ಲಿ ಗಿಡ/ ಮರಗಳನ್ನು ಬೆಳಸತಕ್ಕದ್ದು.

12) ನಿವೇಶನದ ಆವರಣದೊಳಗೆ ಮಳೆ ನೀರು ಕೊಯ್ಲುನ್ನು ಕಡ್ಡಾಯವಾಗಿ ಅಳವಡಿಸತಕ್ಕದ್ದು.

13) ಕಟ್ಟಡದಲ್ಲಿ ಸೋಲಾರ್ ವಾಟರ್ ಹೀಟರ್‌ನ್ನು ಕಡ್ಡಾಯವಾಗಿ ಅಳವಡಿಸತಕ್ಕದ್ದು.

14) ಸದರಿ ನಿವೇಶನಕ್ಕೆ ಸಂಬಂಧಿಸಿದಂತೆ ಸಿವಿಲ್ ವ್ಯಾಜ್ಯಗಳು ಉದ್ಭವಿಸಿದಲ್ಲಿ ನ್ಯಾಯಾಲಯದ ತೀರ್ಮಾನಕ್ಕೆ ಬದ್ಧರಾಗಿರತಕ್ಕದ್ದು.

15) ಸದರಿ ನಿವೇಶನದಲ್ಲಿ ಸರ್ಕಾರದ/ ಅನ್ಯ ಖಾಸಗಿ ಜಮೀನುಗಳೇನಾದರೂ ಸೇರಿಕೊಂಡಿರುವುದು ತಿಳಿದು ಬಂದಲ್ಲಿ, ಅಂತಹ ಸಂದರ್ಭದಲ್ಲಿ ಯೋಜನಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳು ಅನುಮೋದಿತ ಕಟ್ಟಡ ನಕ್ಷೆಯನ್ನು ಮಾರ್ಪಾಡು ಮಾಡಲು ಅಥವಾ ಹಿಂತೆಗೆದುಕೊಳ್ಳಲು ಅಧಿಕಾರವುಳ್ಳವರಾಗಿರುತ್ತಾರೆ.

16) ಪ್ರಸ್ತಾವನೆಗೆ ಸಂಬಂಧಿಸಿದಂತೆ ಅರ್ಜಿದಾರರು ತಪ್ಪುದಾಖಲೆ ಅಥವಾ ಇನ್ನಿತರೆ ಫೋರ್ಜರಿ ದಾಖಲಾತಿಗಳನ್ನು ನೀಡಿರುವುದು ರುಜುವಾತಾದಲ್ಲಿ ಈಗ ನೀಡಿರುವ ಕಟ್ಟಡ ನಕ್ಷೆ ಅನುಮೋದನೆಯು ತನ್ನಿಂದತಾನೇ ರದ್ದಾಗುವುದೆಂದು ಪರಿಗಣಿಸತಕ್ಕದ್ದು.

17) ಕಟ್ಟಡ ಕಾಮಗಾರಿಗಳನ್ನು ಪ್ರಾರಂಭಿಸುವ ಮುನ್ನ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಪತ್ರ ಸಂಖ್ಯೆ: CTE-337126 ದಿನಾಂಕ: 28.03.2023 ಏರ್ ಪೋರ್ಟ್ ಅಥಾರಿಟಿ ಆಫ್ ಇಂಡಿಯಾ ರವರ ಪತ್ರ ಸಂಖ್ಯೆ:BIAL/SOUTH/B/122552/733668 ದಿನಾಂಕ:17.01.2023 ಬೆಂಗಳೂರು ವಿದ್ಯುತ್ ಸರಬರಾಜು ಮಂಡಳಿ ರವರ ಪತ್ರ ಸಂಖ್ಯೆ:EEE/HKTD/AEE(O)AE-1/2022-23/8254 ದಿನಾಂಕ: 07.02.2023, ಕರ್ನಾಟಕ ರಾಜ್ಯ ಅಗ್ನಿಶಾಮಕ ಇಲಾಖೆ ಪತ್ರ ಸಂಖ್ಯೆ: KSFES/NOC/185/2023 ದಿನಾಂಕ:05.08.2023ರಲ್ಲಿ ವಿಧಿಸಿರುವ ಎಲ್ಲಾ ನಿಬಂಧನೆಗಳಿಗೆ ಬದ್ಧರಾಗತಕ್ಕದ್ದು ಮತ್ತು ನಿಬಂಧನೆಗಳನ್ನು ತಪ್ಪದೇ ಪಾಲಿಸತಕ್ಕದ್ದು.

18) ಪ್ರಸ್ತಾವಿತ ಪ್ರದೇಶದಲ್ಲಿ ವಿಕಲಚೇತನರಿಗೆ ಅನುಕೂಲವಾಗುವಂತೆ ಪಾದಚಾರಿ ಮಾರ್ಗವನ್ನು Lift/Rampನಲ್ಲಿ ಎರಡು ಚಕ್ರಗಳ ಖುರ್ಚಿ ಸರಾಗವಾಗಿ ಹೋಗಿಬರುವಂತೆ ಕಡ್ಡಾಯವಾಗಿ ನಿರ್ಮಿಸತಕ್ಕದ್ದು.

19)ಸರ್ಕಾರದ ಸುತ್ತೋಲೆ ಸಂಖ್ಯೆ: ನಅಇ 209 ಬಿಎಂಆರ್ 2016, ದಿನಾಂಕ: 31-03-2017ರ ರೀತ್ಯ ಪತ್ರಿಕೆ, ಮಾಧ್ಯಮ, ಜಾಹೀರಾತು ಪ್ರಕಟಣೆಗಳಲ್ಲಿ ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಹೆಸರನ್ನು ದುರ್ಬಳಕೆ ಮಾಡಿಕೊಳ್ಳುವಂತಿಲ್ಲ. ತಪ್ಪು ಮಾಹಿತಿ ಪ್ರಕಟಿಸದೇ ಅನುಮೋದನೆ ಪಡೆದುಕೊಂಡಿರುವ ಯೋಜನಾ ಪ್ರಾಧಿಕಾರದ ಹೆಸರನ್ನು ಮಾತ್ರ ನಮೂದಿಸತಕ್ಕದ್ದು.

20)ಅನುಮೋದಿತ ನಕ್ಷೆಯ ವಿವರಗಳು ಈ ಕೆಳಕಂಡಂತಿವೆ.

| | | | |
|---|---|---|---|
| i) | **ಉಪಯೋಗ: ವಸತಿ** | | |
| ii) | **ನಡುಜಾಗಗಳು** | **ವಲಯ ನಿಯಮಾವಳಿಯಂತೆ** | **ನಕ್ಷೆಯಂತೆ** |
| | ಮುಂಭಾಗ | 13.0 ಮೀ. | 13.0 ಮೀ. |
| | ಹಿಂಭಾಗ | 13.0 ಮೀ. | 13.0 ಮೀ. |
| | ಎಡಭಾಗ | 13.0 ಮೀ. | 13.0 ಮೀ. |
| | ಬಲಭಾಗ | 13.0 ಮೀ. | 13.0 ಮೀ. |
| iii) | ನಿವೇಶನದ ವಿಸ್ತೀರ್ಣ | – | 9712.36 ಚ.ಮೀ.ಗಳು |
| iv) | ಪ್ಲಿಂತ್ ವಿಸ್ತೀರ್ಣ | – | 2375.81 ಚ.ಮೀ.ಗಳು |
| v) | ಕ್ಷೇತ್ರಾವರಿಸುವಿಕೆ | – | ಶೇ. 24.46% |
| vi) | ಒಟ್ಟು ಕಟ್ಟಡ ನಿರ್ಮಾಣದ ವಿಸ್ತೀರ್ಣ | – | 30139.51 ಚ.ಮೀ.ಗಳು |
| vii) | ಎಫ್.ಎ.ಆರ್. | 2.25 | 2.24 |
| viii) | ವಾಹನ ನಿಲುಗಡೆ | 280 | 280 |
| ix) | ದ್ವಿಚಕ್ರ ವಾಹನ ನಿಲುಗಡೆ | 962.43ಚ.ಮೀ | 962.43ಚ.ಮೀ |
| x) | ರಸ್ತೆ ಮಾರ್ಜಿನ್ | – | – |
| xi) | ಕಟ್ಟಡ ರೇಖೆ | – | – |
| xii) | ಕಟ್ಟಡದ ಎತ್ತರ | 45.00 | 44.37ಮೀ |

21) ಯೋಜನಾ ಪ್ರಾಧಿಕಾರವು ಆಗಿಂದಾಗ್ಗೆ ವಿಧಿಸುವ ನಿಯಮಗಳು/ ಷರತ್ತುಗಳಿಗೆ ಬದ್ಧರಾಗಿರತಕ್ಕದ್ದು.

22) ಮೇಲ್ಕಂಡ ಷರತ್ತುಗಳನ್ನು ಉಲ್ಲಂಘಿಸಿದ್ದಲ್ಲಿ /ಅನುಮೋದಿತ ನಕ್ಷೆಗೆ ವ್ಯತಿರಿಕ್ತವಾಗಿ ಕಟ್ಟಡ ನಿರ್ಮಾಣ ಕೈಗೊಂಡಲ್ಲಿ, ಯೋಜನಾ ಪ್ರಾಧಿಕಾರವು ನೀಡಿರುವ ಅನುಮೋದನೆಯು ತನ್ನಿಂದತಾನೇ ಸ್ವಯಂಚಾಲಿತವಾಗಿ ರದ್ದಾಗುತ್ತದೆ.

23) ಅನುಮೋದಿತ ಕಟ್ಟಡ ನಕ್ಷೆಗಳನ್ನು ರೇರಾ ಪ್ರಾಧಿಕಾರದಲ್ಲಿ ಕಡ್ಡಾಯವಾಗಿ ನೋಂದಣಿ ಮಾಡಿಕೊಳ್ಳತಕ್ಕದ್ದು.

24) ಕಟ್ಟಡ ನಕ್ಷೆಗೆ ಸಂಬಂಧಿಸಿದಂತೆ ವಸತಿ ಮತ್ತು ವಸತಿಯೇತರ ಕಟ್ಟಡಗಳಿಗೆ (Commercial/ Residential) ರೇರಾ ವ್ಯಾಪ್ತಿಗೆ ಒಳಪಡುವ ಕಟ್ಟಡಗಳಿಗೆ ಪ್ರಾರಂಭಿಕ ಪ್ರಮಾಣ ಪತ್ರ (Commencement Certificate) ಮತ್ತು ಸ್ವಾಧೀನಾನುಭವ ಪತ್ರವನ್ನು (Occupancy Certificate) ನೀಡುವ ಮುನ್ನ ಸದರಿ ಯೋಜನೆಯು ರೇರಾದಲ್ಲಿ ನೊಂದಾಯಿಸತಕ್ಕದ್ದು.

25) ಕಟ್ಟಡ ಕಟ್ಟಲು ಪ್ರಾರಂಬಿಸುವ ಮುನ್ನ ಸ್ಟಬಿಲಿಟಿ ಸರ್ಟಿಫೀಕೇಟ್‌ನ್ನು ಸ್ಟ್ರಕ್ಚರಲ್ ಇಂಜಿನಿಯರ್ ರವರಿಂದ ಕಡ್ಡಾಯವಾಗಿ ಪಡೆಯತಕ್ಕದ್ದು.

26) ಸ್ವಾಧೀನಾನುಭವ ಪ್ರಮಾಣ ಪತ್ರ ಮತ್ತು ಪೂರ್ಣಗೊಂಡ ಪ್ರಮಾಣ ಪತ್ರವನ್ನು ಸಂಬಂಧಿತ ಸ್ಥಳೀಯ ಸಂಸ್ಥೆಯಿಂದ ಪಡೆದುಕೊಳ್ಳತಕ್ಕದ್ದು.

..4..

ಮೇಲಿನಂತೆ ನೀಡಲಾಗಿರುವ ಅನುಮತಿಗೆ ವ್ಯತಿರಿಕ್ತವಾಗಿ ಕಟ್ಟಡ ನಿರ್ಮಾಣ ಕಾಮಗಾರಿಯನ್ನು ಕೈಗೊಂಡಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಸೆಕ್ಷನ್ 15(4)ರ ಅಡಿಯಲ್ಲಿ ಅಗತ್ಯ ಕ್ರಮಜರುಗಿಸಲಾಗುವುದು.

prasad 18/12/23

**ಸದಸ್ಯ ಕಾರ್ಯದರ್ಶಿಗಳು**
ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ
ಜಂಟಿ ನಿರ್ದೇಶಕರು,
ಉಪನಗರ ವರ್ತುಲ ರಸ್ತೆ (STRR) ಯೋಜನಾ
ಪ್ರಾಧಿಕಾರ, ಬೆಂಗಳೂರು.

**ಇವರಿಗೆ,**

ಶ್ರೀ ಟಿ.ಎನ್.ಚಿಕ್ಕಣ್ಣ ಬಿನ್ ನಾಗಪ್ಪ ಇವರ ಪರವಾಗಿ
ಮೆ:ಇಶಾ ಕಾರ್ಪ್ ಇದರ ಪ್ರತಿನಿಧಿಯಾದ ಶ್ರೀ ಬಿ.ಬಾಲಕೃಷ್ಣರೆಡ್ಡಿ
ಮತ್ತು ಶ್ರೀ ಲಕ್ಷ್ಮೀಪತಿ.ವಿ, ನಂ.21, ಶ್ರೀ ಚಿಕ್ಕಣ್ಣ ಟಿ.ಎನ್,
ತಿರುಮಲಶೆಟ್ಟಿಹಳ್ಳಿ, ಅನುಗೊಂಡನಹಳ್ಳಿ ಹೋಬಳಿ,
ಹೊಸಕೋಟೆ ತಾಲ್ಲೂಕು.